ಆ)

- ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡಲು ಶಿಕ್ಷಕರ ಹುದ್ದೆಗಳು ಖಾಲಿಯಾದಂತೆ ಶಿಕ್ಷಕರ ಕೊರತೆ ನೀಗಿಸಲು ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುತ್ತಿದೆ;

- ಮೂಲ ಸೌಕರ್ಯಗಳ ಬಗ್ಗೆ ಸರ್ವ ಶಿಕ್ಷಣ ಅಭಿಯಾನದಿಂದ ಶಾಲೆಗಳಿಗೆ ಕುಡಿಯುವ ನೀರು, ಶೌಚಾಲಯ, ಕಾಂಪೌಂಡ್ ಇತ್ಯಾದಿ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

ಇ) ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಕನ್ನಡ ಮತ್ತು ಇಂಗ್ಲೀಷ್ ಭಾಷಾ ಶಿಕ್ಷಕರ ನೇಮಕಾತಿ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ

ಗ್ರಾಮ ಪಂಚಾಯತಿ ನೌಕರರಿಗೆ ಸೌಲಭ್ಯ ಕಲ್ಪಿಸುವುದು

396(537); ಶ್ರೀ ಸಿ ಟಿ ರವಿ (ಚಿಕ್ಕಮಗಳೂರು)

ಅ) ಗ್ರಾಮ ಪಂಚಾಯಿತಿ ನೌಕರರ ಹಿತ ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ನಿಯಮಗಳನ್ನು ರೂಪಿಸಿದೆಯೇ; ಹಾಗಿದ್ದಲ್ಲಿ, ವಿವರ ನೀಡುವುದು;

ಆ) ರಾಜ್ಯದ ಪ್ರತಿ ಗ್ರಾಮ ಪಂಚಾಯತಿಗಳ ಆದಾಯ ವಿವರ ನೀಡುವುದು;

ಇ) ಗ್ರಾಮ ಪಂಚಾಯತಿ ನೌಕರರಿಗೆ ಸರ್ಕಾರವು ಯಾವ ರೀತಿಯ ಸೌಲಭ್ಯಗಳನ್ನು ನೀಡಿದೆ?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಗ್ರಾಅಪ 67 ಗ್ರಾಪಂಸಿ 2006 ದಿನಾಂಕ 04–01–2008ರಲ್ಲಿ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿ ಹಾಗೂ ನೌಕರರ ನೇಮಕಾತಿ ವಿಧಾನದ ಬಗ್ಗೆ ವಿವರಿಸಲಾಗಿದೆ

ಗ್ರಾಮ ಪಂಚಾಯತಿ ನೌಕರರಿಗೆ ಸೇವಾ ನಿಯಮಗಳನ್ನು ರಚಿಸಲು ಸರ್ಕಾರದ ಅಪರ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ

ಆ) ಕರ್ನಾಟಕ ಪಂ.ರಾಜ್ ಅಧಿನಿಯಮ 1993ರ ಪ್ರಕರಣ 199 ರಡಿ ಗ್ರಾಮ ಪಂಚಾಯತಿಗಳು ತೆರಿಗೆಗಳನ್ನು ವಿಧಿಸಲು ಪ್ರದತ್ತವಾದ ಅಧಿಕಾರವನ್ನು ಹೊಂದಿರುತ್ತವೆ. ಪಂಚಾಯತಿ ಪ್ರದೇಶದ ಪರಿಮಿತಿಗಳೊಳಗಿರುವ, ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ತೆರಿಗೆ ವಿಧಿಸಬಹುದಾಗಿದೆ. ಕುಡಿಯುವುದಕ್ಕೆ ಮತ್ತು ಇತರ ಉದ್ದೇಶಗಳಿಗಾಗಿ ನೀರು ಸರಬರಾಜು ಮಾಡಲು ನೀರು ದರವನ್ನು ವಿಧಿಸಬಹುದಾಗಿದೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಯ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು 1994 ರನ್ವಯ ಗ್ರಾಮ ಪಂಚಾಯತಿಗಳು ಸ್ವತ್ತಿನ ಮೇಲೆ, ಕೃಷಿಕರ ನಿರ್ಧರಣೆಗೆ ಒಳಪಟ್ಟಿಲ್ಲದಿರುವ ಭೂಮಿಗಳ ಮೇಲೆ, ಮನೋರಂಜನಾ ತೆರಿಗೆ, ವಾಹನ ತೆರಿಗೆ, ಬಸ್ಸು ನಿಲ್ದಾಣಗಳ ಮೇಲೆ ಫೀಜು, ಮಾರುಕಟ್ಟೆಗಳ ಮೇಲೆ ಫೀಜು, ಜಾಹಿರಾತು ಅಥವಾ ಜಾಹೀರಾತು ಪ್ರಕಟಣಾ ಫಲಕಗಳ ಮೇಲೆ ತೆರಿಗೆ ಮತ್ತು ಜಾನುವಾರುಗಳ ನೋಂದಣಿಗೆ ಫೀಜು ವಿಧಿಸಬಹುದಾಗಿದೆ.

ಇ) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಗ್ರಾಅಪ 07 ಗ್ರಾಪಂಸಿ 2006 ದಿನಾಂಕ.04–01–2008ರಲ್ಲಿ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ

ಮಾದರಿ ಹಾಗೂ ನೌಕರರ ನೇಮಕಾತಿ ವಿಧಾನದ ಬಗ್ಗೆ ವಿವರಿಸಲಾಗಿದ್ದು, ಗ್ರಾಮ ಪಂಚಾಯತಿ ಸಿಬ್ಬಂದಿಗೆ ವಾರ್ಷಿಕವಾಗಿ 15 ದಿನಗಳ ಸಾಂದರ್ಭಿಕ ರಜೆ, ವಾರ್ಷಿಕವಾಗಿ 15 ದಿನಗಳ ಗಳಿಕೆ ರಜೆ (ನಗದೀಕರಣದ ಸೌಲಭ್ಯವಿಲ್ಲ) ಸ್ತ್ರೀಯರಿಗೆ ಸಂಪೂರ್ಣ ಸೇವಾ ಅವಧಿಯಲ್ಲಿ 90 ದಿವಸಗಳಿಗೆ ಮೀರದಂತೆ (2 ಬಾರಿ ಮಾತ್ರ) ಪ್ರಸೂತಿ ರಜೆಗೆ ಅವಕಾಶ ಕಲ್ಪಿಸಲಾಗಿದೆ ಸೇವೆಯಿಂದ ನಿವೃತ್ತಿಯಾಗುವ ಸಿಬ್ಬಂದಿಗೆ ಅಥವಾ ಸೇವೆಯಲ್ಲಿ ಮರಣ ಹೊಂದಿದ ಸಿಬ್ಬಂದಿಯ ನ್ಯಾಯಬದ್ಧ ಅವಲಂಬಿತರಿಗೆ ಅವರುಗಳು ಸಲ್ಲಿಸಿದ ಸೇವಾ ಅವಧಿಯ ಆಧಾರದ ಮೇಲೆ ಒಂದು ವರ್ಷದ ಸೇವೆಗೆ 15 ದಿನಗಳ ವೇತನದಂತೆ ಸೇವಾ ಅವಧಿಯ ಗರಿಷ್ಠ 15 ತಿಂಗಳ ವೇತನ ಮೀರದಂತೆ ನಿವೃತ್ತಿ ಹಾಗೂ ಮರಣೋತ್ತರ ಉಪದಾನಗಳನ್ನು ನೀಡಲಾಗುವುದು

ಗ್ರಾಮೀಣ ರಸ್ತೆಗಳ ಡಾಂಬರೀಕರಣ

430(358); ಶ್ರೀ ತಮ್ಮಣ್ಣ ಡಿ.ಸಿ. (ಮದ್ದೂರು)

ಅ) ರಾಜ್ಯದಲ್ಲಿರುವ ಗ್ರಾಮೀಣ ರಸ್ತೆಗಳ ಉದ್ದ ಎಷ್ಟು,

ಆ) ಈ ಪೈಕಿ ಡಾಂಬರೀಕರಣಗೊಂಡು ಸುಸ್ಥಿತಿಯಲ್ಲಿರುವ ರಸ್ತೆಗಳ ಉದ್ದ ಎಷ್ಟು,

ಇ) ಜಲ್ಲಿ ಹಾಸಿನ ರಸ್ತೆ ಮತ್ತು ಮಣ್ಣಿನ ರಸ್ತೆಗಳ ಉದ್ದ ಎಷ್ಟು,

ಈ) ಜಲ್ಲಿ ಹಾಸಿನ ರಸ್ತೆ ಮತ್ತು ಮಣ್ಣಿನ ರಸ್ತೆಗಳನ್ನು ಡಾಂಬರೀಕರಣಗೊಳಿಸಿ ಮೇಲ್ದರ್ಜೆಗೇರಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಎಚ್ ಕೆ ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ರಾಜ್ಯದಲ್ಲಿ 155545 ಕಿ ಮೀ ಉದ್ದದ ಗ್ರಾಮೀಣ ರಸ್ತೆಗಳಿರುತ್ತವೆ.